ಶ್ರೀ ಎಸ್. ಆರ್. ಬೊಪ್ಪಾಯಿ.—ಫಾರೆಸ್ಟ್ ಇಲಾಖೆಗೆ ಭೂಮಿಯನ್ನು ಇದರಲ್ಲಿ ಕೊಡುವುದಕ್ಕೆ ಕಮಿಟಿಗಳನ್ನು ಮಾಡಿದ್ದೇವೆ. ಆ ಕಮಿಟಿ ಪೊಸ್ಟಪನ್ ಮಾಡುತ್ತಿಲ್ಲ ಎಂದು ಹೇಳುತ್ತಾರೆ. ಆ ಕಮಿಟಿ ಬೇಗ ಸಭೆ ಕರೆದು ಇತ್ಯರ್ಥ ಮಾಡುವುದಕ್ಕೆ ಹೇಳುತ್ತೇನೆ. ಸೌತ್ ಕೆನರಾದಲ್ಲಿ ಕಮಿಟಿ ಆಗಿದೆ. ಅದರ ಬಗ್ಗೆ ನನ್ನ ಹತ್ತಿರ ವಿವರ ಇಲ್ಲ. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಈ ಕಮಿಟಿ ಮಾಡಿದ್ದಾರೆ. ನಿಮ್ಮ ತಾಲ್ಲೂಕಿನಲ್ಲಿ ಆಗದಿದ್ದರೆ ಬೇಗ ಮಾಡುವುದಕ್ಕೆ ಹೇಳುತ್ತೇನೆ.

ಸ್ವೀಪರ್ಸ್ ಪದವೀಧರರನ್ನು ಖಾಯಂಗೊಳಿಸುವುದು

೯೦೯ (೨೩೬೭) ಶ್ರೀ ಚಂದ್ರಶೇಖರ ಮಾಮನಿ (ಧಾರವಾಡ).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿರುವ ಸ್ವೀಪರ್ಸ್ ಪದವೀಧರರ ಸಂಖ್ಯೆ ಎಷ್ಟು, ಆ ಪೈಕಿ ಸರ್ಕಾರದ ಸೇವೆಯಲ್ಲಿ ಖಾಯಂ ಆಗಿ ನೌಕರಿ ಸೇರಿದವರ ಸಂಖ್ಯೆ ಎಷ್ಟು, ಹಾಗೂ ಉಳಿದವರ ಸಂಖ್ಯೆ ಎಷ್ಟು ?

ಆ) ಉಳಿದ ಸ್ವೀಪರ್ಸ್ ಪದವೀಧರರಿಗೆ ೪-೬-೮೭ರ ಸರ್ಕಾರದ ಆದೇಶದ ಪ್ರಕಾರ ಶೇಕಡ ೪೦ ರಷ್ಟು ತುಂಬಲು ಅವಕಾಶವಿದ್ದರೂ ಕೂಡ ಸದರಿಯವರನ್ನು ತುಂಬದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಉಳಿದ ಸ್ವೀಪರ್ಸ್ ಪದವೀಧರರನ್ನು ಸರ್ಕಾರಿ ಸೇವೆಯಲ್ಲಿ ಅಥವಾ ಇತರೇ ಸೇವೆಯಲ್ಲಿ ಖಾಯಂ ಆಗಿ ಪರಿವರ್ತಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಎಸ್. ಕೆ. ಕಾಂತ(ಕಾರ್ಮಿಕ ಮಂತ್ರಿಗಳು).—

ಅ) ಸ್ವೀಪರ್ಸ್ ಪದವೀಧರರ ಸಂಖ್ಯೆ ದಿನಾಂಕ ೧-೧-೮೬ರಂದು ೯,೦೧೯ ದಿನಾಂಕ ೧-೧-೮೭ ರಂದು ೮,೫೦೦ ಮತ್ತು ದಿನಾಂಕ ೧-೧-೮೮ ರಂದು ೭,೫೫೪ ಆಗಿರುತ್ತದೆ. ಕರ್ನಾಟಕ ಲೋಕಸೇವಾ ಆಯೋಗದಿಂದ ಉದ್ಯೋಗ ಪಡೆಯುತ್ತಿರುವ ಸ್ವೀಪರ್ಸ್ ಪದವೀಧರರ ವಿವರ ಈ ರೀತಿ ಇದೆ:—

ಪ್ರಥಮದರ್ಜೆ ಸಹಾಯಕರು — ೪೫೪

ಎರಡನೇದರ್ಜೆ ಸಹಾಯಕರು — ಸುಮಾರು ೫೦೦

ವಾಣಿಜ್ಯತೆರಿಗೆ ಪರಿವೀಕ್ಷಕರು — ೫೫

ಉಳಿದ ಸ್ವೀಪರ್ಸ್ ಪದವೀಧರರ ಸಂಖ್ಯೆ ೬,೫೦೦

ಆ) ಹೌದು. ಸ್ವೀಪರ್ಸ್ ಪದವೀಧರರಿಗೆ ಖಾಯಂ ಉದ್ಯೋಗ ಒದಗಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಹೌದು. ದಿನಾಂಕ ೪-೬-೮೭ರ ಆದೇಶದ ಪ್ರಕಾರ ಖಾಯಂ ಕೆಲಸಗಳಿಗೆ ಸ್ವೀಪರ್ಸ್ ಪದವೀಧರರ ಹೆಸರುಗಳನ್ನು ಸೂಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

೧೧-೩೦ ಎ. ಎಂ:

ಶ್ರೀ ಚಂದ್ರಶೇಖರ ಎಂ. ಮಾಮನಿ.—ಮಾನ್ಯ ಅಧ್ಯಕ್ಷರೇ, ಮೊದಲನೆ ಪ್ರಶ್ನೆಯಲ್ಲಿ ಉತ್ತರವಾಗಿ ಮಾನ್ಯ ಮಂತ್ರಿಗಳು ೧-೧-೮೭ಕ್ಕೆ ೯,೦೧೯ ಸ್ವೀಪರ್ಸ್ ಪದವೀಧರರು ಇದ್ದು ಅವರಲ್ಲಿ ಸುಮಾರು ೬೫೦೦ ಸ್ವೀಪರ್ಸ್ ಪದವೀಧರರು ಉಳಿದುಕೊಂಡಿದ್ದಾರೆಂದು ಹೇಳಿದ್ದಾರೆ, ಇವರ ಬಗ್ಗೆ ಪ್ರತಿ ಅಧಿವೇಶನದಲ್ಲೂ ಧರಖಾಸ್ತು ಕೊಡಲಾಗುತ್ತಿದೆ. ಅವರು ಸಹ ಪ್ರತಿ ಸಾರಿಯು ನಾಲ್ಕೈದು ಸಾವಿರ ಜನ ಬಂದು ಇಲ್ಲಿ ಪ್ರತಿ ಭಟನೆ ನಡೆಸಿ ಮನವಿಯನ್ನು ಕೊಟ್ಟು ಹೋಗಿದ್ದಾರೆ. ಅವರಲ್ಲಿ ಕೆಲವರಿಗೆ ಪರ್ಮನೆಂಟಿಯಾಗಿದೆ. ಇನ್ನು ಕೆಲವರಿಗೆ ನಾಲ್ಕೈದು ಜನ ಮರ್ಕಿದ್ದಾರೆ. ಹೀಗಿದ್ದರೂ ಕೂಡ ಅವರಿಗೆ ಇನ್ನೂ ಖಾಯಂ ಕೆಲಸ ಕೊಟ್ಟಿಲ್ಲ. ಆದ್ದರಿಂದ ತಾವು ಅವರಿಗೆ ಬೇಗ ಖಾಯಂ ಕೆಲಸ ಕೊಡಬೇಕು. ಎರಡನೆಯದಾಗಿ ಸ್ವೀಪರ್ಸ್ ಪದವೀಧರರಿಗೆ ಖಾಯಂ ಉದ್ಯೋಗ ಒದಗಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳಿದ್ದೀರಿ ಎನು ಕ್ರಮ ತೆಗೆದುಕೊಂಡಿದ್ದೀರಿ ? ಈ ಬಗ್ಗೆ

ಸವಿಸ್ತಾರವಾಗಿ ಹೇಳಬೇಕು. ಇನ್ನು ಮೂರನೆಯದಾಗಿ ಉಳಿದ ಸ್ಟೈಪೆಂಡರಿ ಪದವೀಧರರಿಗೆ ಖಾಯಂ ಸರ್ಕಾರಿ ಉದ್ಯೋಗ ಕೊಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದಿದ್ದೀರಿ ಎನು ಕ್ರಮ ಕೈಗೊಳ್ಳುತ್ತಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಮೊದಲನೇ ಪ್ರಶ್ನೆಗೆ ನಾನು ಕ್ಲಿಯರ್ ಉತ್ತರ ಕೊಟ್ಟಿದ್ದೇನೆ. ಸುಮಾರು ಒಂದು ಸಾವಿರ ಜನರನ್ನು ನಾವು ಕೆಲಸದ ಮೇಲೆ ತೆಗೆದುಕೊಂಡಿದ್ದೇವೆ. ಈಗ ಶೇಕಡ ೪೦ ಪರ್ಸೆಂಟ್‌ನಷ್ಟನ್ನು ಈ ಸ್ಟೈಪೆಂಡರಿ ಪದವೀಧರರಿಗೆ ಯಾವುದೇ ರಿಕ್ರೂಟ್‌ಮೆಂಟ್ಸ್ ಮಾಡಲಿ ಅಲ್ಲಿ ಇವರನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ಈ ಬಗ್ಗೆ ನಾವು ೪-೬-೧೯೮೭ರಲ್ಲಿ ಒಂದು ರೂಲ್ಸ್‌ನ್ನು ಪ್ರೈಮ್ ಮಾಡಲಾಗಿದೆ. ಆ ಪ್ರಕಾರ ನೇರವಾಗಿ ನಮ್ಮ ಇಲಾಖೆಗೆ ಇಂತಿಷ್ಟು ಅಭ್ಯರ್ಥಿಗಳು ಬೇಕೆಂದು ತಿಳಿಸುತ್ತಿದ್ದಾರೆ. ಆ ಪ್ರಕಾರವಾಗಿ ನಾವು ಹೆಸರುಗಳನ್ನು ಆಯಾಯಾ ಇಲಾಖೆಗಳಿಗೆ ಕಳುಹಿಸಿಕೊಡುತ್ತಿದ್ದೇವೆ. ಇನ್ನು ವಯೋಮಿತಿ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ವಯೋಮಿತಿಯನ್ನು ಸಡಿಲ ಮಾಡುತ್ತೇವೆನ್ನುವ ಅಶ್ವಾಸನೆಯನ್ನು ಸಹ ಕೊಟ್ಟಿದ್ದೇವೆ. ಈಗ ನಮಗೆ ಬಂದಿರತಕ್ಕ ಕೆಲವು ಇಲಾಖೆಗಳಿಂದ ಕೆಲವು ಹುದ್ದೆಗಳೆಂದರೆ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ೧೮೧ ಹೈಸ್ಕೂಲ್ ಟೀಚರ್ಸ್ ಬೇಕೆಂದು ಕೇಳಿದ್ದಾರೆ. ಅದೇ ರೀತಿ ಬೆಳಗಾಂನಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯವರು ೫೩ ಜನ ಹೈಸ್ಕೂಲ್ ಟೀಚರ್ಸ್ ಬೇಕೆಂದು ಕೇಳಿದ್ದಾರೆ. ಕರ್ನಾಟಕ ಅಡ್ಮಿನಿಸ್ಟ್ರೇಷನ್ ಟ್ರಬ್ಯುನಲ್‌ನವರು, ಬೆಂಗಳೂರು ಇವರು ಎರಡು ಅಸಿಸ್ಟೆಂಟ್ ಹುದ್ದೆಗಳು ಬೇಕೆಂದು ಕೇಳಿದ್ದಾರೆ. ಅದೇ ರೀತಿ ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ಮೂರು ಉದ್ಯೋಗ ಮತ್ತು ತರಭೇತಿ ಆಫೀಸರ್ಸ್ ಬೇಕೆಂದು ಕೇಳಿದ್ದಾರೆ. ಆಮೇಲೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಿಂದ ನಾಲ್ಕು ಜನ ಫಸ್ಟ್ ಡಿವಿಜನ್ ಅಸಿಸ್ಟೆಂಟ್ಸ್ ಬೇಕೆಂದು ಕೇಳಿದ್ದಾರೆ. ಅದೇ ರೀತಿ ಹೆಲ್ತ್ ಅಂಡ್ ಫ್ಯಾಮಿಲಿ ವೆಲ್‌ಫೇರ್ ಸರ್ವೀಸಸ್‌ನಿಂದ ೧೭೫ ಪ್ಯಾರ್ ಮೆಡಿಕಲ್ ವರ್ಕರ್ಸ್ ಬೇಕೆಂದು ಕೇಳಿದ್ದಾರೆ. ಅದೇ ರೀತಿ ಡಿಪಾರ್ಟ್‌ಮೆಂಟ್ ಆಫ್ ಸರ್ವೆ ಸೆಟಲ್‌ಮೆಂಟ್ ಆಂಡ್ ಲ್ಯಾಂಡ್ ರೆಕಾರ್ಡ್ಸ್‌ನವರು ೧೫೦ ಸೆಕೆಂಡ್ ಡಿವಿಜನ್ ಸರ್ವೆಯರ್ಸ್ ಬೇಕೆಂದು ಕೇಳಿದ್ದಾರೆ. ಅದೇ ರೀತಿ ಸಾರ್ವಜನಿಕ ಶಿಕ್ಷಣ ಇಲಾಖೆ ಕೊಡಗುರವರು ೩೩ ಪ್ರಾಥಮಿಕ ಶಾಲಾ ಶಿಕ್ಷಕರು ಬೇಕೆಂದು ಕೇಳಿದ್ದಾರೆ. ಸಾರ್ವಜನಿಕ ಶಿಕ್ಷಣ ಇಲಾಖೆ ಬಿಜಾಪುರ ಇವರು ಸುಮಾರು ೩೨೬ ಟೀಚರ್ಸ್ ಬೇಕೆಂದು ಕೇಳಿದ್ದಾರೆ. ಅದೇ ರೀತಿ ಹೆಲ್ತ್ ಅಂಡ್ ಫ್ಯಾಮಿಲಿ ವೆಲ್‌ಫೇರ್ ಸರ್ವೀಸಸ್ ನವರು ೮ ಜನ ಜೂನಿಯರ್ ಅಸಿಸ್ಟೆಂಟ್ಸ್ ಬೇಕೆಂದು ಬೇಕೆಂದು ಕೇಳಿದ್ದಾರೆ. ಅದೇ ರೀತಿ ಪಬ್ಲಿಕ್ ಲೈಬ್ರರಿ ಅಂಡ್ ಹಾಸ್ಪಿಟಾಲಿಟಿಯವರು ಸುಮಾರು ೧೧ ಹುದ್ದೆಗಳು ಬೇಕೆಂದು ಕೇಳಿದ್ದಾರೆ. ಈ ರೀತಿಯಾಗಿ ಸುಮಾರು ೯೪೮ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಕಳುಹಿಸಿಕೊಂಡಿ ಎಂದು ಕೇಳಿದ್ದಾರೆ. ನಾವು ಅಭ್ಯರ್ಥಿಗಳನ್ನು ಕಳುಹಿಸಿಕೊಡುತ್ತೇವೆ. ಇವರನ್ನು ರಿಕ್ರೂಟ್‌ಮೆಂಟ್ ಮಾಡಿಕೊಳ್ಳುವವರು ಸ್ಟೈಪೆಂಡರಿ ಪದವೀಧರರಿಗೆ ಸುಮಾರು ೪೦ ಪರ್ಸೆಂಟ್ ರಿಸರ್ವೇಶನ್‌ನ್ನು ಇಟ್ಟಿರುತ್ತಾರೆ.

ಶ್ರೀ ಚಂದ್ರಶೇಖರ್ ಎಂ. ಮಾವಿನಿ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಇಲ್ಲ ಕುಳಿತುಕೊಳ್ಳಿ. ನಾನು ಮೊದಲೇ ಹೇಳಿದ್ದೇನೆ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡುವುದಿಲ್ಲ ಎಲ್ಲರಿಗೂ ಒಂದೊಂದು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ. ಎಂದು, ಆದ್ದರಿಂದ ದಯಮಾಡಿ ಸಹಕರಿಸಿ.

ಶ್ರೀ ಚಂದ್ರಶೇಖರ ಎಂ. ಮಾವಿನಿ.—ಮಾನ್ಯ. ಅಧ್ಯಕ್ಷರೇ, ಸುಮಾರು ೯೪೮ ಅಭ್ಯರ್ಥಿಗಳನ್ನು ಕಳುಹಿಸಿಕೊಡಿ ಎಂದು ವಿವಿಧ ಇಲಾಖೆಗಳಿಂದ ಕಳುಹಿಸಿಕೊಟ್ಟಿದ್ದಾರೆ. ಇವರನ್ನು ತಾವು ಇನ್ನು ಎಷ್ಟು ದಿವಸಗಳಲ್ಲಿ ಖಾಯಂ ಮಾಡುತ್ತೀರಿ ?

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ಅಭ್ಯರ್ಥಿಗಳ ಪಟ್ಟಿ ಕಳುಹಿಸಿಕೊಡಿ ಎಂದು ಡಿಪಾರ್ಟ್‌ಮೆಂಟ್‌ನವರು ಕೇಳುತ್ತಾರೆ ನಾವು ಕಳುಹಿಸಿ ಕೊಡುತ್ತೇವೆ. ರಿಕ್ರೂಟ್‌ಮೆಂಟ್ಸ್ ಮಾಡಿಕೊಳ್ಳುವುದು ಆಯಾಯಾ ಇಲಾಖೆಯವರೇ.

ಸಿ ಮತ್ತು ಡಿ ವರ್ಗದ ಭೂಮಿಯ ಬಗ್ಗೆ

425 (1387) ಶ್ರೀ ಜಿ. ರಾಜುಗೌಡ (ಸಿರವಾರ).—ಮಾನ್ಯ ಕಂದಾಯ, ಯೋಜನೆ, ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—